ಸಂಖ್ಯೆ: ಡೀನ್/ಮೀಮಮಂ/ಪಿಎಮ್‌ಎಮ್‌ಎಸ್‌ವೈ/2020-21/3 ದಿನಾಂಕ: 15.03.2022

# ಪ್ರಕಟಣೆ

ವಿಷಯ: ಗುತ್ತಿಗೆ/ ಒಪ್ಪಂದದ ಆಧಾರದ ಮೇಲೆ ಸಾಗರ ಮಿತ್ರರ ನೇಮಕಾತಿ ಕುರಿತು
ಉಲ್ಲೇಖ: ಪತ್ರಸಂಖ್ಯೆ: ಮೀನಿ/26/ಬಿ ಆರ್ ಎಸ್/90/2020/ಇ-377371 ದಿನಾಂಕ: 11.03.2022

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿಯಲ್ಲಿ ದಕ್ಷಿಣ ಕನ್ನಡ (2), ಉಡುಪಿ (43) ಹಾಗೂ ಉತ್ತರ ಕನ್ನಡ ಜಿಲ್ಲೆಗಳ (48) ಆಯ್ದ ಗ್ರಾಮಗಳಿಗೆ ಗುತ್ತಿಗೆ/ಒಪ್ಪಂದದ ಆಧಾರದ ಮೇಲೆ ಸಾಗರ ಮಿತ್ರರನ್ನು ಒಂಭತ್ತು ತಿಂಗಳ ಅವಧಿಗೆ ನೇಮಕಾತಿ ಮಾಡಿಕೊಳ್ಳಲು ಉದ್ದೇಶಿಸಲಾಗಿದೆ. ಈ ಸಂಬಂಧ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳು aaofishcol@gmail.com ಮುಖಾಂತರ/ಖುದ್ದಾಗಿ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 25.03.2022.

ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಯನ್ನು ಮೀನುಗಾರಿಕಾ ಮಹಾವಿದ್ಯಾಲಯದ ಅಧಿಕೃತ ವೆಬ್‌ಸೈಟ್ www.cofm.edu.in ನಲ್ಲಿ ಪಡೆದು ಕೊಳ್ಳಬಹುದು. ತಡವಾಗಿ ಬಂದ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ. ಸಮಿತಿಯ ತೀರ್ಮಾನವೇ ಅಂತಿಮ ತೀರ್ಮಾನವಾಗಿರುತ್ತದೆ.

1. ದಿನಾಂಕ: 04-04-2022 ರಂದು ಬೆಳಗ್ಗೆ 10 ಗಂಟೆಯ ನಂತರ ಡೀನ್ ಮೀನುಗಾರಿಕಾ ಮಹಾವಿದ್ಯಾಲಯ, ಮಂಗಳೂರಿನಲ್ಲಿ ಎಲ್ಲಾ ಅಭ್ಯರ್ಥಿಗಳಿಗೆ ಸಂದರ್ಶನ ನಡೆಸಲಾಗುವುದು.

***** ಈಗಾಗಲೇ ಅರ್ಜಿ ಸಲ್ಲಿಸಿರುವವರು ಮತ್ತೆ ಅರ್ಜಿ ಹಾಕಬೇಕಿಲ್ಲ.**

**ಷರತ್ತು ಮತ್ತು ನಿಬಂಧನೆಗಳು**

1. ಸಂದರ್ಶನವನ್ನು ಖುದ್ದಾಗಿ / ಆನ್ ಲೈನ್ ಮುಖಾಂತರ ನಡೆಸಲಾಗುವುದು.
2. ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಸಂದರ್ಶನಕ್ಕೆ ಹಾಜರಾಗತಕ್ಕದು. ಪ್ರವಾಸ ಭತ್ಯೆ ಹಾಗೂ ಇನ್ನಿತರ ಯಾವುದೇ ಭತ್ಯೆಗೆ ಅರ್ಹರಾಗಿರುವುದಿಲ್ಲ.
3. ಮೇಲೆ ತಿಳಿಸಿದ ಹುದ್ದೆಗಳು ಸಂಪೂರ್ಣವಾಗಿ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಆಗಿರುತ್ತದೆ. ಸಂಬಂಧ ಪಟ್ಟಂತೆ ಖಾಯಂ ಮತ್ತು ಹಿರಿತನ ಅರ್ಹತೆಗೆ ಪರಿಗಣಿಸಲಾಗುವುದಿಲ್ಲ.
4. ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಹೊಂದಿದ ಅಭ್ಯರ್ಥಿಗಳಿಗೆ ಮುಂಚಿತವಾಗಿ ಯಾವುದೇ ಮಾಹಿತಿ ನೀಡದೆ ಗುತ್ತಿಗೆ ಅವಧಿಯನ್ನು ರದ್ದು ಪಡಿಸುವ ಹಾಗೂ ತೆಗೆದುಹಾಕುವ ಹಕ್ಕನ್ನು ಮೀನುಗಾರಿಕಾ ಇಲಾಖೆಯ ಅಧಿಕಾರಿಗಳು ಹೊಂದಿರುತ್ತಾರೆ.
5. ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಹೊಂದಿದ ಅಭ್ಯರ್ಥಿಗಳನ್ನು ಅವಶ್ಯಕತೆಗನುಗುಣವಾಗಿ ಮೀನುಗಾರಿಕಾ ಇಲಾಖೆ ಅಧಿಕಾರಿಗಳು ನಿಗದಿಪಡಿಸಿದ ಕೆಲಸವನ್ನು ನಿಯೋಜಿಸಲು ಸಂಪೂರ್ಣ ಹಕ್ಕನ್ನು ಹೊಂದಿರುತ್ತಾರೆ.
6. ಸಾಗರ ಮಿತ್ರರನ್ನು ಆಯ್ಕೆ ಮಾಡುವಾಗ ಕರ್ನಾಟಕ ಸರ್ಕಾರ ನಿಗದಿ ಪಡಿಸಿರುವ ರೋಸ್ಟರ್ ಪದ್ಧತಿಗೆ ಅನುಗುಣವಾಗಿ ಆಯ್ಕೆ ಮಾಡಲಾಗುವುದು.
7. ಆಯ್ಕೆಯಾದ ಸಾಗರ ಮಿತ್ರರು ಆಯಾ ಜಿಲ್ಲೆಗಳಲ್ಲಿ ನೇಮಿಸಿರುವ ಮೀನುಗಾರಿಕಾ ಅಧಿಕಾರಿಗಳಿಗೆ ವರದಿ ಮಾಡಿಕೊಳ್ಳಬೇಕು
8. ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆ ಅಡಿಯಲ್ಲಿ ಆಯ್ಕೆಯಾದ ಸಾಗರ ಮಿತ್ರರಿಗೆ ಈ ಯೋಜನೆ ಪೂರ್ಣಗೊಂಡ ನಂತರ ಮೀನುಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರ ಅಥವಾ ಕೇಂದ್ರ ಸರ್ಕಾರದಿಂದ ಯಾವುದೇ ಪ್ರೋತ್ಸಾಹ ಧನವನ್ನು ಕೊಡಲಾಗುವುದಿಲ್ಲ. ಅದೇ ರೀತಿ ಸಾಗರ ಮಿತ್ರರಾಗಿ ಕೆಲಸ ಮುಂದುವರಿಸಲು ಅವಕಾಶವಿರುವುದಿಲ್ಲ.
9. ಸಾಗರ ಮಿತ್ರರು ತಾವು ನೇಮಕ ಹೊಂದಿರುವ ಗ್ರಾಮದಲ್ಲೇ ವಾಸವಾಗಿರಬೇಕು.
10. ಅಭ್ಯರ್ಥಿಗಳು ಸಂದರ್ಶನದ ವೇಳೆ ಅವರ ಹುಟ್ಟಿದ ದಿನಾಂಕ, ವಿದ್ಯಾರ್ಹತೆ, ಜಾತಿ ಪ್ರಮಾಣಪತ್ರ ಹಾಗೂ ಅನುಭವದ ಪ್ರಮಾಣ ಪತ್ರಗಳ ಮೂಲ ಪ್ರತಿಯನ್ನು ತೋರಿಸಬೇಕು.

**ಸಾಗರ ಮಿತ್ರ ಕೆಲಸದ ಮೂಲ ಉದ್ದೇಶಗಳು**

1. ಸಾಗರ ಮಿತ್ರರು ಮೀನುಗಾರರ ಯಾವುದೇ ಬೇಡಿಕೆ ಹಾಗೂ ಸೇವೆಗಳಿಗೆ ಸ್ಪಂದಿಸುವ ಮೊದಲನೇ ವ್ಯಕ್ತಿಯಾಗಿರಬೇಕು.
2. ಸ್ಥಳೀಯ ಮೀನುಗಾರರಿಗೆ ಬೇರೆ ಬೇರೆ ಯೋಜನೆಗಳ ಹಾಗೂ ಕಾರ್ಯಕ್ರಮಗಳ ಬಗ್ಗೆ ತಿಳುವಳಿಕೆ ಮೂಡಿಸಬೇಕು ಮತ್ತು ಸಂಪನ್ಮೂಲಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸುವುದರ ಬಗ್ಗೆ ಮಾಹಿತಿ ಕೊಡಬೇಕು.
3. ಮೀನುಗಾರರಿಗೆ ಹವಾಮಾನ ಮುನ್ಸೂಚನೆ ಹಾಗೂ ನೈಸರ್ಗಿಕ ವಿಪತ್ತುಗಳ ಬಗ್ಗೆ ಮಾಹಿತಿ ಕೊಡಬೇಕು.
4. ಮೀನುಗಾರರಿಗೆ ತಾಜ ಮೀನುಗಳ ಸ್ವಚ್ಛತೆ, ವೈಯ್ಯಕ್ತಿಕ ಸ್ವಚ್ಛತೆ, ಆರೋಗ್ಯಕರವಾದ ವಾತಾವರಣ ನಿರ್ವಹಣೆ ಹಾಗೂ ಆರೋಗ್ಯಕರವಾಗಿ ಬದುಕುವುದರ ಬಗ್ಗೆ ತಿಳುವಳಿಕೆ ಮೂಡಿಸಬೇಕು.
5. ಮೀನುಗಾರರಿಗೆ ಮತ್ಸ್ಯ ಸಂಪನ್ಮೂಲವನ್ನು ವ್ಯವಸ್ಥಿತವಾಗಿ ಸಂರಕ್ಷಿಸುವುದು, ಉಪಯೋಗಿಸುವುದು, ಸಮುದ್ರಗಳ ಪ್ರಾಮುಖ್ಯತೆ, ಕರಾವಳಿಯ ಪರಿಸರದ ಸಂರಕ್ಷಣೆ, ಕಾನೂನುಬಾಹಿರವಾದ, ಜವಾಬ್ದಾರಿಯುತ ಮೀನುಗಾರಿಕೆಯಲ್ಲಿ ನೀತಿ ಸಂಹಿತೆ, ವರದಿ ಮಾಡದ ಹಾಗೂ ಅಕ್ರಮ ಮೀನುಗಾರಿಕೆಯನ್ನು ತಡೆಯುವ ಬಗ್ಗೆಯೂ ಸಹ ತಿಳುವಳಿಕೆ ಮೂಡಿಸಬೇಕು.
6. ಮಹಿಳೆಯರ ಆರ್ಥಿಕತೆಯನ್ನು ಬೇರೆಬೇರೆ ಉಪ ಜೀವನೋಪಾಯದಿಂದ, ಮೀನಿನ ಸಂಸ್ಕರಣೆ ಹಾಗೂ ಮೀನು ಮಾರಾಟದ ಚಟುವಟಿಕೆಗಳಿಂದ ಅಭಿವೃದ್ಧಿ ಪಡಿಸುವುದರ ಬಗ್ಗೆ ಹೆಚ್ಚಿನ ಮಾಹಿತಿ ನೀಡಬೇಕು ಹಾಗೂ ಮೀನುಗಾರ ಮಹಿಳೆಯರಿಗೆ ಈ ವಿಷಯದಲ್ಲಿ ತರಬೇತಿ ನೀಡಬೇಕು.
7. ಮೀನುಗಾರಿಕೆಗೆ ಹೊರ ಹೋಗುವ, ಒಳಬರುವ ದೋಣಿಗಳ, ಮೀನಿನ ಉತ್ಪಾದನೆ, ಎಷ್ಟು ಮೀನು ದೊರೆತಿದೆ, ಅವುಗಳ ಬೆಲೆ ಹಾಗೂ ಅವುಗಳ ಮಾರಾಟದ ವಿವರವನ್ನು ಸಂಗ್ರಹಿಸಿ ಪ್ರತಿನಿತ್ಯವೂ ಸರ್ಕಾರಕ್ಕೆ ಮೀನುಗಾರಿಕಾ ಇಲಾಖೆಯ ಮುಖಾಂತರ ವರದಿ ಸಲ್ಲಿಸಬೇಕು.

**ಪ್ರಧಾನ ಮಂತ್ರಿ ಮತ್ಸ್ಯಸಂಪದ ಯೋಜನೆಯ ಅಡಿಯಲ್ಲಿ ಸಾಗರ ಮಿತ್ರರನ್ನು ಆಯ್ಕೆ ಮಾಡುವ ವಿಧಾನಗಳು:**

1. ಅವನು/ಅವಳನ್ನು ಗುತ್ತಿಗೆ/ಒಪ್ಪಂದದ ಪ್ರಕಾರ ನೇಮಕಾತಿ ಮಾಡಿಕೊಂಡು ತಿಂಗಳಿಗೆ ರೂ.15,000/– (ಹದಿನೈದು ಸಾವಿರ ರೂಪಾಯಿಗಳು ಮಾತ್ರ) ಸಂಭಾವನೆ ಕೊಡಲಾಗುತ್ತದೆ.
2. ಅವನು/ಅವಳನ್ನು ಒಂದು ಗ್ರಾಮಕ್ಕೆ ಒಬ್ಬರಂತೆ ನೇಮಿಸಲಾಗುತ್ತದೆ.
3. ಅವನು/ಅವಳು ಮೀನುಗಾರಿಕೆ ವಿಜ್ಞಾನ/ಕಡಲಿನ ಜೀವಶಾಸ್ತ್ರ/ಪ್ರಾಣಿಶಾಸ್ತ್ರ/ಬಿ.ಎಸ್‌ಸಿ/ಪದವಿ/ದ್ವಿತೀಯ ಪಿಯುಸಿ ತೇರ್ಗಡೆಯಾಗಿರಬೇಕು. ಮೀನುಗಾರಿಕೆ ವಿಜ್ಞಾನದಲ್ಲಿ ಪದವಿ/ಬಿ.ಎಸ್‌ಸಿ ಪದವಿ ಪಡೆದವರಿಗೆ ಪ್ರಾಮುಖ್ಯತೆ ಕೊಡಲಾಗುತ್ತದೆ.
4. ಅವನು/ಅವಳು ಸ್ಥಳೀಯ ಅಭ್ಯರ್ಥಿಯಾಗಿದ್ದರೆ ಹೆಚ್ಚಿನ ಆದ್ಯತೆ ಕೊಡಲಾಗುತ್ತದೆ.
5. ವಯಸ್ಸು ೩೫ ವರ್ಷಕ್ಕಿಂತ ಹೆಚ್ಚಿರಬಾರದು.
6. ಅವನು/ಅವಳು ಸ್ಥಳೀಯ ಭಾಷೆಯಲ್ಲಿ ಪರಿಣಾಮಕಾರಿಯಾಗಿ ವ್ಯವಹರಿಸುವಂತೆ ಇರಬೇಕು.
7. ಜನರನ್ನು ಒಗ್ಗೂಡಿಸುವ ಹಾಗೂ ಮೀನುಗಾರರನ್ನು ಹುರಿದುಂಬಿಸುವ ಚತುರತೆ ಇರಬೇಕು.
8. ಕೆಲಸದ ಬಗ್ಗೆ ಬದ್ಧತೆ ಇದ್ದು ಮೀನುಗಾರರಲ್ಲಿ ಬದಲಾವಣೆ ತರುವಂತಿರಬೇಕು.

## **“ಮುಚ್ಚಳಿಕೆ”**

ನಾನು ಈ ಮೂಲಕ ಮೇಲೆ ತಿಳಿಸಿರುವ ಮಾಹಿತಿಯು ನನಗೆ ತಿಳಿದ ಮಟ್ಟಿಗೆ ಸತ್ಯವಾದದ್ದು. ನಾನು ಸಾಗರ ಮಿತ್ರ ಕೆಲಸದ ಮೂಲ ಉದ್ದೇಶಗಳನ್ನು ಸರಿಯಾಗಿ ಓದಿದ್ದೇನೆ ಹಾಗೂ ಅದನ್ನು ಸಂಪೂರ್ಣವಾಗಿ ಒಪ್ಪಂದ/ ಗುತ್ತಿಗೆ ಆಧಾರದ ಮೇರೆಗೆ ಎಂದು ಹೇಳಿಕೆ ಕೊಡುತ್ತೇನೆ. ಪ್ರಧಾನಮಂತ್ರಿ ಮತ್ಸ್ಯಸಂಪದ ಅಡಿಯಲ್ಲಿ ಬರುವ ಸಾಗರ ಮಿತ್ರ ಕೆಲಸ ಮಾಡಲು ಕರ್ನಾಟಕ ಸರ್ಕಾರದ ಮೀನುಗಾರಿಕೆ ಇಲಾಖೆಯ ಷರತ್ತುಗಳಿಗೆ ಬದ್ಧನಾಗಿರುತ್ತೇನೆ ಎಂದು ಈ ಮೂಲಕ ಘೋಷಿಸುತ್ತೇನೆ.

ದಿನಾಂಕ**:** ಅಭ್ಯರ್ಥಿಯ ಸಹಿ

ಸ್ಥಳ**:**

**Application for the post of "SAGAR MITRA" under PMMSY on contractual basis in the Department of Fisheries, Government of Karnataka**

| | |
|---|---|
| Name of the Candidate<br>ಅಭ್ಯರ್ಥಿಯ ಹೆಸರು | |
| Father/Husband Name<br>ತಂದೆ/ಗಂಡನ ಹೆಸರು | |
| Permanent Address<br>ಖಾಯಂ ಮನೆಯ ವಿಳಾಸ | |
| Correspondence Address<br>ಪತ್ರವ್ಯವಹಾರ ವಿಳಾಸ | |
| Contact Telephone/Mobile number<br>ಸಂಪರ್ಕಿಸುವ ದೂರವಾಣಿ ಸಂಖ್ಯೆ | |
| e - mail ID<br>ಸಂಪರ್ಕಿಸುವ ಇ–ಮೇಲ್ ಐಡಿ | |
| Education qualification (Enclose the documents)<br>ವಿದ್ಯಾರ್ಹತೆ (ಪ್ರಮಾಣ ಪತ್ರ ಲಗತ್ತಿಸುವುದು) | |
| Documents for address proof and identity (Enclose the documents)<br>ವಿಳಾಸ ಮತ್ತು ಗುರುತಿನ ಬಗ್ಗೆ ಪುರಾವೆ /ದಾಖಲಾತಿಗಳು (ಪ್ರಮಾಣ ಪತ್ರ ಲಗತ್ತಿಸುವುದು) | |
| Date of birth and Age (Enclose the documents)<br>ಹುಟ್ಟಿದ ದಿನಾಂಕ ಮತ್ತು ವಯಸ್ಸು (ಪ್ರಮಾಣ ಪತ್ರ ಲಗತ್ತಿಸುವುದು) | |
| Sex<br>ಲಿಂಗ | (Male / Female)<br>(□□□□ / □□□□□□□) |
| Caste<br>□□□□ | SC/ST/OBC/Others (Enclose the Caste certificate)<br>ಪರಿಶಿಷ್ಟ ಜಾತಿ/ಪಂಗಡ/ಒಬಿಸಿ/ಇತರೆ<br>(ಜಾತಿ ಪ್ರಮಾಣ ಪತ್ರ ಲಗತ್ತಿಸುವುದು) |
| Languages known<br>ತಿಳಿದಿರುವ ಭಾಷೆಗಳು | |
| Experience (Enclose the documents)<br>ಅನುಭವ (ಪ್ರಮಾಣ ಪತ್ರ ಲಗತ್ತಿಸುವುದು) | |
| Presently employed<br>ಯಾವುದಾದರೂ ಕೆಲಸದಲ್ಲಿ ಇರುವರೆ | Yes/No ( If Yes , give details in separate sheet)<br>□□□□/□□□□ (□□□□□□□□□□, □□□□ □□□□□□□□□) |
| Locality (Nearby landing centre)<br>(ಹತ್ತಿರವಿರುವ ತಂಗುದಾಣ ಸ್ಥಳ) | |
| Locality (Nearby Fishing village)<br>ಸ್ಥಳ (ಹತ್ತಿರವಿರುವ ಮೀನುಗಾರಿಕಾ ಗ್ರಾಮ) | |
| The coastal district in which you would like to work<br>ಯಾವ ಕರಾವಳಿ ಜಿಲ್ಲೆಯಲ್ಲಿ ನೀವು ಕೆಲಸ ಮಾಡಲು ಬಯಸಿದ್ದೀರಿ | |